**<u>ಅಸಲು ದಾವಾ ಸಂಖ್ಯೆ: 162 /2012</u>** ಪಿ.ಡಬ್ಲ್ಯೂ 2

ದಿನಾಂಕಃ 03.08.2022 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಹೆಚ್.ಆರ್.ಕೆ ವಕೀಲರಿಂದಃ</u>**

ನಾನು ಈ ದಾವಾ ಪಕ್ಷಗಾರರಲ್ಲ ಎಂದರೆ ಸರಿ. ವಾದಿ ಗಂಗಯ್ಯ ನನ್ನ ಸಂಬಧಿಯಲ್ಲ. ದಾವಾ ಆಸ್ತಿಯು ವಾದಿ ಗಂಗಯ್ಯನ ಸ್ವಾಧೀನದಲ್ಲಿರುತ್ತದೆ. ಈ ದಾವಾ ದಾಖಲಿಸುವ ಮೊದಲು ವಾದಿ ದಾವಾ ಆಸ್ತಿಯಲ್ಲಿ ರಾಗಿ ಬೆಳೆ ಬೆಳೆಯುತ್ತಿದ್ದರು. ದಾವಾ ದಾಖಲಿಸಿದ ನಂತರ ದಾವಾ ಆಸ್ತಿಯಲ್ಲಿ ಯಾವುದೇ ಬೆಳೆ ಬೆಳೆಯುತ್ತಿಲ್ಲ. ದಿನಾಂಕಃ 13.03.1973 ರಂದು ವಾದಿಯು 1 ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಭೋಗ್ಯಕ್ಕೆ ಹಾಕಿದ್ದರು. ಆ ಸಮಯದಲ್ಲಿ ನಾನು ಹಾಜರಿರಲಿಲ್ಲ. ಸದರಿ ವಿಚಾರವನ್ನು ನನಗೆ ವಾದಿಯೇ ತಿಳಿಸಿರುತ್ತಾರೆ. ಸದರಿ ಭೋಗ್ಯ ಪತ್ರದಂತೆ ವಾದಿಯು ದಾವಾ ಆಸ್ತಿಯ ಸ್ವಾಧೀನವನ್ನು 1 ನೇ ಪ್ರತಿವಾದಿಗೆ ಬಿಟ್ಟುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ಭೋಗ್ಯ ಪತ್ರವನ್ನು ಓದಿದ್ದೇನೆ .

ದಾವಾ ಆಸ್ತಿಯನ್ನು ಈಗ 1 ನೇ ಪ್ರತಿವಾದಿಯು 10 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ 9 ಎ ರಿಂದ 9 ಎಫ್ ನೇ ಪ್ರತಿವಾದಿ ಪರ ಶ್ರೀ ಕೆ.ಎನ್.ಎಸ್ ವಕೀಲರಿಂದಃ**

ನಾನು ಗಂಗಗೊಂಡನಹಳ್ಳಿ ಗ್ರಾಮದಲ್ಲಿ ವಾಸವಿದ್ದೇನೆ. ದಾವಾ ಆಸ್ತಿಯು ನಾಗಸಂದ್ರ ಗ್ರಾಮದಲ್ಲಿರುತ್ತದೆ. ನಾಗಸಂದ್ರಕ್ಕೂ ಗಂಗಗೊಂಡನಹಳ್ಳಿಗೂ 7-8 ಕಿ. ಮಿ. ದೂರವಿರುತ್ತದೆ. ನಾಗಸಂದ್ರ ಗ್ರಾಮದಲ್ಲಿ ನನಗೆ ಯಾವುದೇ ಆಸ್ತಿ ಇಲ್ಲ ಎಂದರೆ ಸರಿ. ದಾವಾ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆಃ ಹಳ್ಳ, ಪಶ್ಚಿಮಕ್ಕೆಃ ಕನವನಹಳ್ಳಿ ಎಲ್ಲೆ, ಉತ್ತರಕ್ಕೆಃ ಇದೇ ಸ್ವತ್ತಿನ ಉಳಿಕೆ ಜಮೀನು ಮತ್ತು ಹಳ್ಳ, ದಕ್ಷಿಣಕ್ಕೆಃ ಇದೇ ಜಮೀನು ಮತ್ತು ಹಳ್ಳ.

ದಾವಾ ಆಸ್ತಿಗೆ ಸಂಬಂಧಿಸಿದ ಇತ್ತೀಚಿನ ದಾಖಲಾತಿಗಳನ್ನು ನಾನು ನೋಡಿರುತ್ತೇನೆ. ದಿನಾಂಕಃ 26.04.1974 ರಂದು ದಾವಾ ಆಸ್ತಿಯನ್ನು ವಾದಿ ಮತ್ತು ಕುಟುಂಬದವರು 1 ನೇ ಪ್ರತಿವಾದಿಗೆ ಮಾರಾಟ ಮಾಡಿ ಸ್ವಾಧೀನ ವಹಿಸಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ನಾನು ಪರಿಶೀಲಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿದ ಇತ್ತೀಚಿನ ಪಹಣಿಗಳನ್ನು ನಾನು ನೋಡಿಲ್ಲ ಎಂದರೆ ಸರಿ. ದಿನಾಂಕಃ 05.11.1999 ರಂದು ದಾವಾ ಆಸ್ತಿಯ ಪೈಕಿ 1 ಎಕರೆ 20 ಗುಂಟೆಯನ್ನು 1 ನೇ ಪ್ರತಿವಾದಿಯು 9 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿ ಕ್ರಯ ಪತ್ರದಂತೆ 9 ನೇ ಪ್ರತಿವಾದಿ ಹೆಸರಿಗೆ ಖಾತೆ ಬದಲಾವಣೆಯಾಗಿರುತ್ತದೆ ಎಂದರೆ ಗೊತ್ತಿಲ್ಲ. ನನ್ನನ್ನು ವಾದಿಯೇ ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. ವಾದಿಯು ಮಾಹಿತಿ ನೀಡಿದ ಮೇರೆಗೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ

ಸರಿ.  ದಾವಾ ಸ್ವತ್ತು ವಾದಿಗೆ ಸೇರಿರದಿದ್ದರೂ ಸಹ ಸಹಾಯವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ 10 ನೇ ಪ್ರತಿವಾದಿ ಪರ ಶ್ರೀ ಕೆ.ಎನ್.ಎಸ್ ವಕೀಲರಿಂದಃ</u>**

ನಾನು 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ.  ಸರ್ವೇ ನಂ. 26/4 ರಲ್ಲಿ 6 ಎಕರೆ ಜಮೀನು ವಾದಿ, 2 ನೇ ಪ್ರತಿವಾದಿ ಗಂಡ ವೆಂಕಟರಮಣಯ್ಯ ಮತ್ತು 5 ರಿಂದ 8 ನೇ ಪ್ರತಿವಾದಿಯರ ತಂದೆ ಕೆಂಚಯ್ಯ ರವರಿಗೆ ಸೇರಿದ ಆಸ್ತಿಯಾಗಿತ್ತು ಎಂದರೆ ಸರಿ. ವಾದಿ, ವೆಂಕಟರಮಣಯ್ಯ ಮತ್ತು ಕೆಂಚಯ್ಯರವರು ದಾವಾ ಆಸ್ತಿಯನ್ನು 1 ನೇ ಪ್ರತಿವಾದಿಗೆ ಭೋಗ್ಯಕ್ಕೆ ನೀಡಿದ್ದರು ಎಂದರೆ ಸರಿ. ವಾದಿ, ವೆಂಕಟರಮಣಯ್ಯ, ಕೆಂಚಯ್ಯ ಮತ್ತು ಅವರ ತಾಯಿ ರಾಮಕ್ಕ ಸೇರಿ ದಾವಾ ಆಸ್ತಿ ಜೊತೆಗೆ 1 ಎಕರೆ ಸೇರಿಸಿ ಒಟ್ಟು 6 ಎಕರೆ ಜಮೀನು ದಿನಾಂಕಃ **26.04.1974** ರಂದು 1 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.  1 ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಭೋಗ್ಯಕ್ಕೆ ಹಾಕಿದ್ದ ಬಾಬ್ತು ಹಣ ತೀರಿಸಲು, ಎತ್ತುಗಳನ್ನು ಕೊಂಡುಕೊಳ್ಳಲು, ಕೈ ಸಾಲ ತೀರಿಸಲು ದಿನಾಂಕಃ **26.041974** ರಂದು ದಾವಾ ಆಸ್ತಿಯನ್ನು ಸೇರಿದಂತೆ 6 ಎಕರೆ ಸೇರಿದಂತೆ 1 ನೇ ಪ್ರತಿವಾದಿಗೆ ಮಾರಾಟ ಮಾಡಲಾಗಿದೆ ಎಂದು ಕ್ರಯ ಪತ್ರದಲ್ಲಿ ನಮೂದು ಆಗಿದೆ ಎಂದರೆ ನನಗೆ ಗೊತ್ತಿಲ್ಲ.  ಭೋಗ್ಯ ಪತ್ರವಾದಾಗಿನಿಂದಲೂ ದಾವಾ ಆಸ್ತಿಯಲ್ಲಿ 1 ನೇ ಪ್ರತಿವಾದಿಯೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.  1 ನೇ ಪ್ರತಿವಾದಿಯು ಭೋಗ್ಯಪತ್ರವಾದಾಗಿನಿಂದ ಸ್ವಾಧೀನದಲ್ಲಿದ್ದು ನಂತರ ಕ್ರಯಪತ್ರವಾದ ನಂತರ ಸ್ವಾಧೀನ ಮುಂದುವರೆಸಿರುತ್ತಾರೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಪಹಣಿಯು 1 ನೇ ಪ್ರತಿವಾದಿಯ ಹೆಸರಿನಲ್ಲಿ ಬರುತ್ತಿತ್ತು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು 1 ಎಕರೆ 20 ಗುಂಟೆಯನ್ನು 9 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಉಳಿದ 4 ಎಕರೆ 20 ಗುಂಟೆಯನ್ನು 1 ನೇ ಪ್ರತಿವಾದಿಯು ದಿನಾಂಕಃ 18.06.2004 ರಂದು 10 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 10 ನೇ ಪ್ರತಿವಾದಿಯು ಆಸ್ತಿಯನ್ನು ಖರೀದಿಸಿದಾಗಿನಿಂದಲೂ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ನಾನು ಮತ್ತು ವಾದಿ ಸಂಬಂಧಿಕರು ಎಂದರೆ ಸರಿಯಲ್ಲ. ವಾದಿ, 2 ರಿಂದ 9 ಪ್ರತಿವಾದಿಗಳ ಹೇಳಿಕೆ ಮೇರೆಗೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಖಾತೆ 9 ಮತ್ತು 10 ನೇ ಪ್ರತಿವಾದಿ ಹೆಸರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ವಾದಿ, 2 ರಿಂದ 9 ಪ್ರತಿವಾದಿಗಳಿಗೆ ದಾವಾ ಆಸ್ತಿಗಳ ಮೇಲೆ ಹಕ್ಕಿಲ್ಲ ಎಂದರೆ ಸರಿಯಲ್ಲ. **1974** ರಲ್ಲಿ ದಾವಾ ಆಸ್ತಿ ಮಾರಾಟ ಮಾಡಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1973 ರಲ್ಲಿ ನನಗೆ 7 ವರ್ಷ ಎಂದರೆ ಸರಿಯಲ್ಲ. 1974 ರ ಕ್ರಯ ಪತ್ರದ ಬಗ್ಗೆ ನನಗೆ ವೈಯುಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ.

ಮರುವಿಚಾರಣೆ ಇರುವುದಿಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸ. ಇದೆ.

3 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ನೆಲಮಂಗಲ.